# ಹೊರಳು ಹಾದಿಯಲ್ಲಿ ಅಂಜಲಿ

**‘ಬದಲಾಗುವ ದಾರಿ’ ಕಿರುಚಿತ್ರದ ಮೂಲಕ ನಿರ್ದೇಶನದ ಹಾದಿಯಲ್ಲಿ ಮೊದಲ ಹೆಜ್ಜೆ ಇಟ್ಟಿದ್ದಾರೆ ನಟಿ ಅಂಜಲಿ ಅನೀಶ್. ಹೃದಯಕ್ಕೆ ಹತ್ತಿರವಾಗುವಂಥ, ಸರಳ, ಸುಂದರ ಕಥೆಗಳನ್ನು ಜನರ ಮುಂದಿಡುವ ಬಯಕೆ ಅವರದ್ದು.**

**■ ಸುಮಲತಾ ಎನ್.**

‘ಪದವಿಪೂರ್ವ’ ಸಿನಿಮಾದಲ್ಲಿ ಕಾಲೇಜು ಹುಡುಗಿ ಪಾತ್ರದಲ್ಲಿ ಮುದ್ದಾಗಿ ನಟಿಸಿ ಸೈ ಎನಿಸಿಕೊಂಡಿದ್ದ ನಟಿ ಅಂಜಲಿ ಅನೀಶ್ ಅವರಿಗೆ ನಟಿಯಾಗಿ ಮಾತ್ರವಲ್ಲ, ನಿರ್ದೇಶನದಲ್ಲಿಯೂ ತಮ್ಮದೊಂದು ಗುರುತು ಉಳಿಸಬೇಕೆಂಬ ಹಂಬಲ.

ಇದೇ ಆಸೆಯೊಂದಿಗೆ ಹಲವು ವರ್ಷಗಳ ಕೆಳಗೆ ಅವರು ಬೆಂಗಳೂರಿನಿಂದ ಮುಂಬೈ ಹಾದಿ ಹಿಡಿದು ಅನುಪಮ್ ಖೇರ್ ನಟನಾ ಶಾಲೆಯಲ್ಲಿ ಸಿನಿಮಾ ಪಟ್ಟುಗಳನ್ನು ಕಲಿತದ್ದು. ಇದೀಗ ಆ ಕನಸಿನ ಹಾದಿಯಲ್ಲಿ ಮೊದಲ ಹೆಜ್ಜೆಯನ್ನಿಟ್ಟಿದ್ದು, ಕಿರುಚಿತ್ರವೊಂದನ್ನು ರೂಪಿಸಿದ್ದಾರೆ. ‘ಬದಲಾಗುವ ದಾರಿ’ ಎಂಬ ಕಿರುಚಿತ್ರದ ಮೂಲಕ ಸರಳವಾದ, ಆದರೆ ಮನಮುಟ್ಟುವಂಥ ಕಥೆಯನ್ನು ನಿರೂಪಿಸಿರುವುದಾಗಿ ತಿಳಿಸಿದ್ದಾರೆ.

‘ಇಬ್ಬರು ವ್ಯಕ್ತಿಗಳು ಹಲವು ವರ್ಷಗಳ ನಂತರ ಭೇಟಿ ಮಾಡಿದಾಗ ಹುಟ್ಟುವ ಕಥೆಯಲ್ಲಿ, ಆ ವ್ಯಕ್ತಿಗಳ ಪಯಣ, ಜೀವನ, ನೆನಪು... ಹೀಗೆ ವಿಶಿಷ್ಟ ಅನುಭವಗಳನ್ನು ಕುತೂಹಲಕಾರಿಯಾಗಿ ಕಟ್ಟಿಕೊಡುವ ಪ್ರಯತ್ನ’ ಎಂದು ಪುಟ್ಟದಾಗಿ ಪರಿಚಯ ನೀಡುತ್ತಾರೆ ಅಂಜಲಿ.

ನಿರ್ದೇಶನದೆಡೆಗಿನ ಆಸಕ್ತಿಯಿಂದ ಹದಿನೇಳನೆ ವಯಸ್ಸಿಗೇ ಸಿನಿಮಾರಂಗದತ್ತ ಬಂದವರು ಅಂಜಲಿ. ಕನ್ನಡದ ‘ಅಂಬಿ ನಿಂಗ್ ವಯಸ್ಸಾಯ್ತೊ’, ಹಿಂದಿಯ ‘ಭಯ್ಯಾಜಿ ಸೂಪರ್ ಹಿಟ್’ ಸಿನಿಮಾಗಳಿಗೆ ಸಹಾಯಕ ನಿರ್ದೇಶಕಿಯಾಗಿ ಕೆಲಸ ಮಾಡಿರುವ ಅವರಲ್ಲಿ ಆಗಿನಿಂದಲೂ ಕಥೆಯೊಂದನ್ನು ತೆರೆ ಮೇಲೆ ತರಬೇಕೆಂಬ ಆಲೋಚನೆ ಆಳವಾಗಿತ್ತು. ಇದೀಗ ತಮ್ಮ ಈ ಮೊದಲ ಪ್ರಯತ್ನಕ್ಕೆ ಕಿರುಚಿತ್ರದ ಮಾಧ್ಯಮ ಆರಿಸಿಕೊಂಡಿದ್ದಾರೆ. ಚಿಕ್ಕದಾಗಿ ಚೊಕ್ಕದಾಗಿ ಕಥೆ ಹೇಳಲು ಕಿರುಚಿತ್ರ ಉತ್ತಮ ಆಯ್ಕೆ. ಕಿರುಚಿತ್ರ ಸುಲಭ ಅನ್ನಿಸಿದರೂ ಸವಾಲೂ ಹೌದು ಎನ್ನುವುದು ಅವರ ಅಭಿಪ್ರಾಯ.

‘ಈ ಕಿರುಚಿತ್ರ 10–12 ನಿಮಿಷದ್ದು. ಸಾಮಾನ್ಯವಾಗಿ ಚಿತ್ರಗಳಿಗೆ ಕಾಂಪ್ಲೆಕ್ಸ್ ಕಥೆಗಳನ್ನು ಆಯ್ದುಕೊಳ್ಳುತ್ತಾರೆ. ಆದರೆ ಸರಳ ಕಥೆಗಳು ಜನರ ಮನಸ್ಸಿಗೆ ತಟ್ಟುತ್ತವೆ ಎಂಬುದು ನನ್ನ ಅಭಿಪ್ರಾಯ. ಇಂಥದ್ದೇ ಕಥೆಗಳನ್ನು ತೆರೆ ಮೇಲೆ ತರಬೇಕೆಂಬ ಆಲೋಚನೆಯಿದೆ’ ಎಂದು ಹೇಳುತ್ತಾರೆ.

ಸಿನಿಮಾ ಬರವಣಿಗೆಯಲ್ಲಿ ಮಹಿಳೆಯರ ಪ್ರಾತಿನಿಧ್ಯ ಇನ್ನಷ್ಟು ಹೆಚ್ಚಬೇಕಿದೆ ಎನ್ನುವ ಅವರು, ಈ ನಿಟ್ಟಿನಲ್ಲಿ ಸದಾ ತಮ್ಮ ಪ್ರಯತ್ನ ಇರುವುದಾಗಿ ಹೇಳುತ್ತಾರೆ. ‘ಹೆಣ್ಣುಮಕ್ಕಳನ್ನು ಹೆಣ್ಣುಮಕ್ಕಳು ಸಿನಿಮಾದಲ್ಲಿ ತೋರಿಸುವ ರೀತಿ ಬೇರೆಯಿರುತ್ತದೆ ಎಂದು ಭಾವಿಸಿದ್ದೇನೆ. ನಮ್ಮ ದೃಷ್ಟಿಯಲ್ಲಿನ ಹೆಣ್ಣನ್ನು ಸಮಾಜಕ್ಕೆ ಹೆಚ್ಚೆಚ್ಚು ತೋರಬೇಕಿದೆ. ನಮ್ಮ ದೃಷ್ಟಿಕೋನವೂ ಅಲ್ಲಿ ಬಿಂಬಿತವಾಗಬೇಕಿದೆ’ ಎನ್ನುತ್ತಾರೆ.

ಇದೇ ಜುಲೈನಲ್ಲಿ ತಮ್ಮ ಕಿರುಚಿತ್ರವನ್ನು ಬಿಡುಗಡೆ ಮಾಡುವ ಯೋಜನೆಯಿದ್ದು, ಕನ್ನಡದ ಎರಡು ಸಿನಿಮಾಗಳಲ್ಲಿ ಅಭಿನಯಿಸುತ್ತಿದ್ದಾರೆ. ದೊಡ್ಡ ಮಟ್ಟದಲ್ಲಿ ಸಿನಿಮಾ ಮಾಡುವ ತಮ್ಮ ಕನಸಿಗೆ ಈ ಕಿರುಚಿತ್ರ ಕಿರುದಾರಿ ರೂಪಿಸುವ ಭರವಸೆಯಲ್ಲಿದ್ದಾರೆ. ■

